ಕುರಿತು ಸಾಕ್ಷ್ಯಚಿತ್ರ ತಯಾರಿಸುತ್ತಿದ್ದಾಗ ತನಗೆ ಕಿರಿಕಿರಿ ಉಂಟುಮಾಡಲು ಬಂದಿರುವ ಹಕ್ಕಿಯೆಂದು ತಿಳಿದ ಚಿಂಪಾಂಜಿ ಡ್ರೋನ್‌ನನ್ನು ಮುರಿದು ಬಿಸಾಕಿತ್ತು.

ಆಸ್ಟ್ರೇಲಿಯಾ, ಡ್ರೋನ್‌ಗನ್ ಎಂಬ ಡ್ರೋನ್ ಅಸ್ತ್ರ ತಯಾರಿಸಿದ್ದು ಅದು ಡ್ರೋನ್ ಮೊಬೈಲ್ ಸಿಗ್ನಲ್‌ಗಳನ್ನು ತುಂಡರಿಸುವ ಶಕ್ತಿ ಹೊಂದಿದ್ದು, 2 ಕಿ.ಮೀ. ಉದ್ದದವರೆಗೂ ದಾಳಿ ಮಾಡುವ ಸಾಮರ್ಥ್ಯ ಹೊಂದಿದೆ ಎನ್ನಲಾಗಿದೆ.

- 2014ರಲ್ಲಿ ಮುಂಬೈನ ಫ್ರಾನ್ಸೆಸ್ಕೊ ವೆಜ್ಜಾ ಅಂಗಡಿಯಿಂದ ಡ್ರೋನ್ ಉಪಯೋಗಿಸಿ ವರ್ಲಿಯಲ್ಲಿ ವಾಸವಿರುವ ಬಹುಮಹಡಿ ಕಟ್ಟಡದ ಗ್ರಾಹಕನಿಗೆ ಪಿಜ್ಜಾ ಡೆಲಿವರಿ ಮಾಡಲಾಗಿತ್ತು. ಡ್ರೋನ್ ಹಾರಾಟಕ್ಕೆ ಲೈಸೆನ್ಸ್ ಇಲ್ಲದ್ದರಿಂದ ಅಂಗಡಿ ವಿರುದ್ಧ ಪೊಲೀಸ್ ಕೇಸು ದಾಖಲಾಗಿತ್ತು.

## ಡ್ರೋನ್‌ಗಳು ಮತ್ತು ಹೊರ ಜಗತ್ತು

ಮಿಲಿಟರಿ ಕೆಲಸಗಳಿಗಾಗಿ ಡ್ರೋನ್‌ಗಳ ಬಳಕೆಗಾಗಿ 2020ರ ಕೊನೆಯ ವೇಳೆಗೆ ವಿಶ್ವದ ನಾನಾ ದೇಶಗಳು ಸುಮಾರು 70 ಶತಕೋಟಿ ಡಾಲರ್ ಹಣ ವ್ಯಯಿಸಲಿವೆ ಎಂದು 'ಗೋಲ್ಡ್‌ಮನ್ ಸಾಚ್ಸ್'ನ ಇತ್ತೀಚಿನ ವರದಿ ಹೇಳಿದೆ. ಅಮೆರಿಕದ ಒಂದೇ ಒಂದು 'ಪ್ರಿಡೇಟರ್' ಡ್ರೋನ್‌ನ ಬೆಲೆ 40 ಲಕ್ಷ ಡಾಲರ್ ಆಗಿದ್ದು, ಅಂಥ ಸಾವಿರಾರು ಡ್ರೋನ್‌ಗಳನ್ನು ಹೊಂದಿರುವ ಅಮೆರಿಕ ಈ ವರ್ಷ ತನ್ನ ಸೈನಿಕ ಬಲಕ್ಕಾಗಿ 24 ಶತಕೋಟಿ ಡಾಲರ್ ಹಣ ಮೀಸಲಿಟ್ಟಿದೆ. ಗ್ರಾಹಕ ಬಳಕೆಯ ಸಾಮಾನ್ಯ ಡ್ರೋನ್‌ಗಳಿಗೂ ಅಪಾರ ಬೇಡಿಕೆ ಇದ್ದು, ಈ ವರ್ಷ 40 ಲಕ್ಷ ಡ್ರೋನ್‌ಗಳ ಮಾರಾಟ ಮಾರುಕಟ್ಟೆ ಸೃಷ್ಟಿಯಾಗಿದೆ ಎಂಬುದು ವರದಿಯಲ್ಲಿದೆ.

ಫೋಟೊಗ್ರಫಿ, ವಿಡಿಯೊಗ್ರಫಿ, ಚಲನಚಿತ್ರ ತಯಾರಿಕೆ, ಗೇಮಿಂಗ್ ಮತ್ತು ಹವ್ಯಾಸಕ್ಕಾಗಿ ಡ್ರೋನ್ ಬಳಸುವವರ ಸಂಖ್ಯೆ ವಿಶ್ವಾದ್ಯಂತ ಹೆಚ್ಚಲಿದೆ. ಈಗಾಗಲೇ 7ನೇ ಜನರೇಶನ್‌ನ ಡ್ರೋನ್‌ಗಳು ಲಭ್ಯವಿದ್ದು, 3D ರೊಬಾಟಿಕ್ಸ್ ಸಂಸ್ಥೆಯು ಆಲ್‌ಇನ್‌ಒನ್ ಸ್ಮಾರ್ಟ್ ಡ್ರೋನ್‌ನ್ನು ತಯಾರಿಸಿದೆ. ಇದು ಮಿಲಿಟರಿ, ನಾಗರಿಕ ಸೇವೆ, ಸರಕು–ಮಾನವ ಸಾಗಣೆ, ತುರ್ತು ಪರಿಸ್ಥಿತಿ ನಿರ್ವಹಣೆಗೆ ನೆರವಾಗಲಿದೆ.

## ಡ್ರೋನ್‌ಗಳ ಜಾಬ್ ಮಾರ್ಕೆಟ್

ವಾಯುಗುಣ, ಹವಾಮಾನ, ರಿಯಲ್ ಎಸ್ಟೇಟ್, ಸಮೀಕ್ಷೆ ಮತ್ತು ಸರ್ವೆ ನಡೆಸುವ ಸಂಸ್ಥೆಗಳು, ನಕ್ಷೆ ತಯಾರಿಕೆ, ಕಟ್ಟಡ, ಡ್ಯಾಂ, ಬ್ರಿಡ್ಜ್, ಇನ್‌ಶ್ಯೂರೆನ್ಸ್, ಗೋಪುರ ನಿರ್ಮಾಣ, ಮೂಲಭೂತ ಸೌಕರ್ಯ ಮತ್ತು ಮನೋರಂಜನೆ ಕ್ಷೇತ್ರಗಳಲ್ಲಿ ಡ್ರೋನ್‌ಗಳ ಬಳಕೆ ಅನಿವಾರ್ಯವಾಗಿರುವುದರಿಂದ, ಆ ಕ್ಷೇತ್ರಗಳಲ್ಲೆಲ್ಲಾ ಡ್ರೋನ್ ಪೈಲಟ್‌ಗಳಿಗೆ ಕೆಲಸವಿದೆ. ಪ್ರಸಕ್ತ ವರ್ಷದಲ್ಲೇ ಡ್ರೋನ್ ಮಾರುಕಟ್ಟೆಯಿಂದಾಗಿ ವಿಶ್ವದಾದ್ಯಂತ ಮೂರು ಲಕ್ಷ ಕೆಲಸಗಾರರಿಗೆ ಬೇಡಿಕೆ ಸೃಷ್ಟಿಯಾಗುತ್ತದೆ ಎಂದಿರುವ ಅಮೆರಿಕದ 'ಫೆಡರಲ್ ಏವಿಯೇಶನ್ ಅಡ್ಮಿನಿಸ್ಟ್ರೇಶನ್' ಸಂಸ್ಥೆ, ಇನ್ನೈದು ವರ್ಷಗಳಲ್ಲಿ ಬೇಡಿಕೆ ನಾಲ್ಕು ಪಟ್ಟು ಹೆಚ್ಚಲಿದೆ ಎಂದಿದೆ.

ಕಳೆದ ಕೆಲವು ವರ್ಷಗಳಲ್ಲಿ ಕೇವಲ ಹವ್ಯಾಸವೆನಿಸಿದ್ದ ಡ್ರೋನ್ ಶೂಟಿಂಗ್‌ನ ಸೇವೆ ಮುಂದಿನ ಆರು ವರ್ಷಗಳಲ್ಲಿ ಶೇ. 51ರಷ್ಟು ವೃದ್ಧಿಯಾಗಲಿದೆ ಎಂಬ ಅಂದಾಜಿದೆ. ಕಾನೂನು ಪಾಲನೆ, ಕೃಷಿ, ವಿಶೇಷ ಉತ್ಪನ್ನ ತಯಾರಿಸುವ ಕಾರ್ಖಾನೆಗಳಿಗೂ ಡ್ರೋನ್‌ಗಳು ಬೇಕಾಗುವುದರಿಂದ ಹೈಸ್ಕೂಲ್ ನಂತರ ಪದವಿ ಗಳಿಸಿರುವ ವಿದ್ಯಾರ್ಥಿಗಳು ಪೂರ್ಣಾವಧಿ ಕೆಲಸಗಾರರಾಗಿ ನೌಕರಿ ಪಡೆಯಬಹುದು. ಅಮೆರಿಕ, ಕೆನಡಾ, ಜರ್ಮನಿ ಸರ್ಕಾರಗಳು ಡ್ರೋನ್ ಪೈಲಟ್‌ಗಳ ಅವಶ್ಯಕತೆ ಮತ್ತು ಹಾರುವ ಡ್ರೋನ್‌ಗಳ ಪರಿಮಿತಿ ಎರಡರ ಕುರಿತೂ ಹೆಚ್ಚಿನ ಆಸ್ಥೆ ತೋರಿಸಿದ್ದು, ಡ್ರೋನ್ ಪೈಲಟ್ ಹುದ್ದೆಯತ್ತ ಯುವ ಜನರನ್ನು ಆಕರ್ಷಿಸುವಲ್ಲಿ ಯಶಸ್ವಿಯಾಗಿವೆ. ಸದ್ಯದ ಮಾರುಕಟ್ಟೆಯಲ್ಲಿ

### ಅಸ್ತ್ರರೂಪಿ ಡ್ರೋನ್‌ಗಳು

'ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆ' (ಡಿಆರ್‌ಡಿಒ) ಹಲವಾರು ಮಾನವರಹಿತ ಆಕಾಶ ವಾಹನಗಳನ್ನು ತಯಾರಿಸಿದ್ದು, ಈಗ ಡ್ರೋನ್ ಅಸ್ತ್ರಗಳನ್ನು ತಯಾರಿಸುವಲ್ಲಿ ಉತ್ಸುಕವಾಗಿದೆ. ಅವುಗಳೆಂದರೆ:

ಲಕ್ಷ್ಯ: ರಾಕೆಟ್ ಲಾಂಚ್ ಮಾಡುವ ಮೋಟರ್ ಹೊಂದಿರುವ ಇದು ಟರ್ಬೋಜೆಟ್ ಎಂಜಿನ್‌ನಿಂದ ಶಕ್ತಿ ಪಡೆದು ಉದ್ದೇಶಿತ ಗುರಿಯ ಮೇಲೆ ಆಕ್ರಮಣ ಮಾಡುತ್ತದೆ.

ನಿಶಾಂತ್: ಪ್ರಾಥಮಿಕವಾಗಿ ಮಾಹಿತಿ ಸಂಗ್ರಹಣೆಗಾಗಿ ಇದನ್ನು ರೂಪಿಸಲಾಗಿದ್ದರೂ, ತೀವ್ರನಿಗಾ, ಶತ್ರುತಾಣ ಪತ್ತೆ, ಗುರಿ ನಿರ್ಧಾರ, ಹಾರಿದ ಅಸ್ತ್ರದ ಗುರಿ ಸರಿಪಡಿಸಲು ಮತ್ತು ಆಯಾ ಪ್ರದೇಶದಲ್ಲಾದ ನಾಶವನ್ನು ಅಭ್ಯಸಿಸಲು ಬಳಸಲಾಗುತ್ತಿದೆ.

ರುಸ್ತುಂ: ಅಮೆರಿಕದ 'ಪ್ರಿಡೇಟರ್' ಡ್ರೋನ್‌ನ ಹೋಲಿಕೆಯ ಮಧ್ಯಮ ಎತ್ತರ ಮತ್ತು ದೀರ್ಘ ಶಕ್ತಿಯ ಡ್ರೋನ್ ಇದಾಗಿದ್ದು ರಕ್ಷಣೆ ಮತ್ತು ದಾಳಿ ಎರಡಕ್ಕೂ ಬಳಸಬಹುದಾಗಿದೆ.

